# ಮೈಸೂರಲ್ಲೂ ವೈದ್ಯರನ್ನು ಉಳಿಸಿ ಚಳವಳಿ

ಮೈಸೂರು, ಆ೨೬(ಎಸ್‌ಬಿಡಿ)- ವೈದ್ಯಕೀಯ ಪದವಿ ಸೀಟುಗಳಿಗೆ ಸಮನಾಂತರವಾಗಿ ಸ್ನಾತಕೋತ್ತರ ಸೀಟುಗಳನ್ನು ಕಲ್ಪಿಸುವಂತೆ ಆಗ್ರಹಿಸಿ ದೇಶದಾದ್ಯಂತ ಕರೆ ನೀಡಿದ್ದ ವೈದ್ಯರನ್ನು ಉಳಿಸಿ ಚಳವಳಿ ಇಂದು ಮೈಸೂರು ನಗರದಲ್ಲೂ ನಡೆಯಿತು.

ನಗರದ ಜೆಎಸ್‌ಎಸ್ ಹಾಗೂ ಸರ್ಕಾರಿ ವೈದ್ಯಕೀಯ ಕಾಲೇಜಿನ ನೂರಾರು ವೈದ್ಯಕೀಯ ವಿದ್ಯಾರ್ಥಿಗಳು, ಕೈಗೆ ಕಪ್ಪು ಪಟ್ಟಿ ಧರಿಸಿ ಜೆ.ಕೆ.ಮೈದಾನದಿಂದ ಇರ್ವಿನ್ ರಸ್ತೆ, ಅಶೋಕರಸ್ತೆ ಮೂಲಕ ಗಾಂಧಿ ವೃತ್ತದವರೆಗೆ ಜಾಥಾ ನಡೆಸಿದರು.

ಮೆರವಣಿಗೆಯುದ್ದಕ್ಕೂ ಸ್ನಾತಕೋತ್ತರ ಸೀಟುಗಳನ್ನು ಹೆಚ್ಚಿಸುವಂತೆ ಘೋಷಣೆಗಳನ್ನು ಕೂಗಿದ ವಿದ್ಯಾರ್ಥಿಗಳು ಮೆರವಣಿಗೆ ಅಂತ್ಯಗೊಂಡ ಗಾಂಧಿ ವೃತ್ತದಲ್ಲಿ ಅರ್ಧ ಗಂಟೆಗೂ ಹೆಚ್ಚು ಕಾಲ ಧರಣಿ ನಡೆಸಿದರು.

ಈ ಸಂದರ್ಭದಲ್ಲಿ ದೇಶದಲ್ಲಿರುವ ತಜ್ಞವೈದ್ಯರ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವಂತೆ ಘೋಷಣೆಗಳನ್ನು ಕೂಗಿ ಒತ್ತಾಯಿಸಿದರು.

ತೀವ್ರ ಉಸಿರಾಟದ ಸಮಸ್ಯೆ, ಹೃದಯಾಘಾತ, ಪಾರ್ಶ್ವವಾಯು, ಅತಿಸಾರದಂತಹ ರೋಗಗಳಿಂದ ಬಳಲುತ್ತಿರುವ ೧೦ ರೋಗಿಗಳಲ್ಲಿ ಒಬ್ಬರಿಗೆ ಮಾತ್ರ ತಜ್ಞ ವೈದ್ಯರ ಸೇವೆ ದೊರಕುತ್ತಿದೆ ಸಮಾಜದಲ್ಲಿನ ಈ ಪ್ರಮುಖ ಸಮಸ್ಯೆ ನಿವಾರಿಸುವ ನಿಟ್ಟಿನಲ್ಲಿ ಪದವಿ ಪೂರೈಸುವ ವಿದ್ಯಾರ್ಥಿಗಳಿಗೆ ಅಗತ್ಯವಿರುವಷ್ಟು ಸ್ನಾತಕೋತ್ತರ ಸೀಟುಗಳನ್ನು ಕಲ್ಪಿಸಬೇಕಿದೆ ಎಂದು ಆಗ್ರಹಿಸಿದರು.

ಸದ್ಯ ದೇಶದಲ್ಲಿ ವಾರ್ಷಿಕ ೪೭ ಸಾವಿರ ವೈದ್ಯಕೀಯ ಪದವಿ ಸೀಟುಗಳಿವೆ ಆದರೆ ಸ್ನಾತಕೋತ್ತರ ಸೀಟುಗಳ ಸಂಖ್ಯೆ ಕೇವಲ ೧೨ ಸಾವಿರ ಮಾತ್ರ. ಇದರಿಂದಾಗಿ ಪದವಿ ಪೂರೈಸಿದ ಎಲ್ಲಾ ವಿದ್ಯಾರ್ಥಿಗಳಿಗೂ ಸ್ನಾತಕೋತ್ತರ ಪದವಿ ಪಡೆಯುವುದು ಸಾಧ್ಯವಾಗುತ್ತಿಲ್ಲ. ಈ ಸೀಟುಗಳ ಸಂಖ್ಯೆಯಲ್ಲಿನ ಅಧ್ವಾನವನ್ನು ಪರಿಹರಿಸಿ ವಿದ್ಯಾರ್ಥಿಗಳ ಅಮೂಲ್ಯವಾದ ಸಮಯ ವ್ಯರ್ಥವಾಗುವುದನ್ನು ತಡೆಯುವಂತೆ ಧರಣಿ ನಿರತರು ಒತ್ತಾಯಿಸಿದರು.